ಮೈಸೂರು ನಗರ ಶಿಶುಸಂರಕ್ಷಣಾ ಸಂಸ್ಥೆಯ ಬಗ್ಗೆ

೨೧೦೩. ಶ್ರೀ ಪಿ. ಎಂ. ಚಿಕ್ಕ ಬೋರಯ್ಯ (ಚಾಮರಾಜ).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧) ಮಾಜಿ ರಾಜಧಾನಿಯಾ ಶೈಕ್ಷಣಿಕ ಕೇಂದ್ರವೂ ಆಗಿರುವ ಮೈಸೂರಿನಲ್ಲಿ ಪ್ರಸ್ತುತ ಮಕ್ಕಳ ಆರೋಗ್ಯ ರಕ್ಷಣೆಗೆ '' ಶಿಶು ಸಂರಕ್ಷಣಾ ಶಿಕ್ಷಣ ಸಂಸ್ಥೆ '' ಯನ್ನು ಪ್ರಾರಂಭಿಸಲು ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

೨) ಹಾಗಿದ್ದಲ್ಲಿ ಪ್ರಪಂಚದ ಆರೋಗ್ಯ ಸಂಸ್ಥೆ ಬ್ಯಾಂಕ್ ವಿಶ್ವ ಆರೋಗ್ಯ ಸಂಸ್ಥೆಗಳಿಂದ ಹಾಗೂ ಕೇಂದ್ರ ಸರ್ಕಾರದಿಂದ ಪಡೆಯುವ ನೆರವಿನ ಒಂದು ಪಾಲನ್ನು ಉಪಯೋಗಿಸಿ ಸದರಿ ಸಂಸ್ಥೆಯನ್ನು ಪ್ರಾರಂಭಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೇ ?

೩) ಈ ಸಂಸ್ಥೆಯ ಸ್ಥಾಪನೆಯಿಂದ ಮಕ್ಕಳ ಆರೋಗ್ಯ ಸಕಾಲಿಕ ರಕ್ಷಣೆಗಾಗಿ ವೈದ್ಯಕೀಯ ಪದವೀಧರರಿಗೆ ಅವಶ್ಯ ತರಬೇತಿ ನೀಡಿದಂತಾಗುವುದಿಲ್ಲವೆ ?

ಶ್ರೀ ಬಿ. ರಾಚಯ್ಯ (ಆರೋಗ್ಯ ಮಂತ್ರಿ ಕುಟುಂಬ ಕಲ್ಯಾಣ ಸಚಿವರು).—

೧) ಈ ಬಗ್ಗೆ ಸರ್ಕಾರಕ್ಕೆ ಇದುವರೆಗೂ ಯಾವುದೇ ಪ್ರಸ್ತಾವನೆಯು ಬಂದಿರುವುದಿಲ್ಲ.

೨) ಉದ್ಭವಿಸುವುದಿಲ್ಲ.

೩) ಸಧ್ಯಕ್ಕೆ ಅನ್ವಯಿಸುವುದಿಲ್ಲ.

ಮೈಸೂರು ನಗರದ ಕೃಷ್ಣ ರಾಜೇಂದ್ರ ಆಸ್ಪತ್ರೆ

೨೪೧೦ ಶ್ರೀ ಪಿ ಎಂ. ಚಿಕ್ಕ ಬೋರಯ್ಯ (ಚಾಮರಾಜ).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮೈಸೂರು ನಗರದ ಕೃಷ್ಣ ರಾಜೇಂದ್ರ ಆಸ್ಪತ್ರೆಯಲ್ಲಿ ೧೯೮೬-೮೭ರಲ್ಲಿ ಒಳ ಮತ್ತು ಹೊರ ರೋಗಿಗಳ ಸಂಖ್ಯೆ ಎಷ್ಟು ?

ಆ) ನಗರದಲ್ಲಿ ಹೆಚ್ಚುತ್ತಿರುವ ಜನ ಸಂಖ್ಯೆಗೆ ಅನುಗುಣವಾಗಿ ಆಸ್ಪತ್ರೆಯನ್ನು ವಿಸ್ತರಿಸುವ ದೃಷ್ಟಿಯಿಂದ ಪ್ರಾರಂಭಿಸಲ್ಪಟ್ಟ ಹೊಸ ಕಟ್ಟಡ ಆರ್ಧಾಂತ್ಯದಲ್ಲಿ ನಿಲ್ಲಿಸಲು ಕಾರಣವೇನು ?

ಇ) ಸದ್ಯದಲ್ಲಿ ಆಸ್ಪತ್ರೆಯ ಒಳ ಮತ್ತು ಹೊರ ರೋಗಿಗಳಿಗೆ ಅನುಗುಣವಾಗಿ ಸಿಬ್ಬಂದಿ ಒದಗಿಸಲಾಗಿದೆಯೇ ?

ಈ) ಸ್ಥಳದ ಅಭಾವದಿಂದ ನಗರದ ಹಾಗೂ ಜಿಲ್ಲೆಯ ಅನೇಕ ರೋಗಿಗಳಿಗೆ ಒಳರೋಗಿಯಾಗಿ ಸೇರಿಸಿಕೊಳ್ಳದೆ ತೊಂದರೆಗೀಡಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಉ) ಆರ್ಧಾಂತ್ಯದಲ್ಲಿರುವ ಕಟ್ಟಡದ ಕೆಲಸವನ್ನು ಈ ವರ್ಷವಾದರೂ ಮುಂದುವರಿಸುವ ಸಾಧ್ಯತೆ ಇದೆಯೆ ?

ಶ್ರೀ ಬಿ. ರಾಚಯ್ಯ (ಆರೋಗ್ಯ ಮಂತ್ರಿಗಳು).—

ಅ) ಒಳ ರೋಗಿಗಳ ಸಂಖ್ಯೆ : ೨೪,೧೧೫

ಹೊರ ರೋಗಿಗಳ ಸಂಖ್ಯೆ : ೩,೫೪,೯೫೮

ಆ) ಮೈಸೂರು ಕೃಷ್ಣ ರಾಜೇಂದ್ರ ಆಸ್ಪತ್ರೆಯ ಹೊರ ರೋಗಿಗಳ ವಿಭಾಗವನ್ನು ೭೨-೦೦ ಲಕ್ಷ ರೂಪಾಯಿಗಳ ಅಂದಾಜು ವೆಚ್ಚದಲ್ಲಿ ನಿರ್ಮಿಸಲು ಮಂಜೂರಾತಿ ನೀಡಲಾಗಿತ್ತು. ಪರಿಷ್ಕೃತ ನಕ್ಷೆ ಪ್ರಕಾರ ಕಟ್ಟಡ ನಿರ್ಮಾಣವನ್ನು ಮುಂದುವರೆಸಲು ಗುತ್ತಿಗೆದಾರರು ಸಾಮಗ್ರಿಗಳು ಮತ್ತು ಹೆಚ್ಚಳದ ಕಾರಣ ಬಿಡ್ಡಿ ಒಪ್ಪದಿದುರಿಂದ ಕೆಲಸ ಸ್ಥಗಿತ ಗೊಂಡಿತು. ಉಳಿದ ಕೆಲಸವನ್ನು ಲೋಕೋಪ